1	2	3	4	5	6
4.	ಹೊನ್ನಾವರ	16.80	13.00	-	+7.00
5.	ಕಾರವಾರ	15.30	12.00	50.00	-4.00
6.	ಕುಮಟಾ	24.00	14.00	-	+10.00
7.	ಮುಂಡಗೋಡ್	30.04	51.00	-	-45.00
8.	ಸಿದ್ಧಾಪುರ	67.72	93.00	150.00	+ 23.00
9.	ಸಿರಸಿ	63.60	218.00	200.00	- 23.00
10.	ಸೂಪಾ	-	4.00	-	-4.00
11.	ಎಲ್ಲಾಪುರ	34.84	47.00	150.00	+15.00
	ಒಟ್ಟು	**322.46**	**533.00**	**650.00**	**-**

ಸೂಚನೆ + ಹೆಚ್ಚಾಗಿರುವುದು.

- ಕಡಿಮೆಯಾಗಿರುವುದು.

ಮಂಗಳೂರು ನಗರದಲ್ಲಿ ಪರಿಶಿಷ್ಟ ಜಾತಿ ವಿದ್ಯಾರ್ಥಿನಿಲಯದ ಪ್ರಾರಂಭ

1589 - ಶ್ರೀ ಎನ್‌ಯೋಗೇಶ್ ಭಟ್ ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ನಗರದ ಉರ್ವ ಮಾಡಿಗುಡಿಯ ಹತ್ತಿರವಿರುವ ಪರಿಶಿಷ್ಟ ಜಾತಿ ವಿದ್ಯಾರ್ಥಿನಿಲಯ ಉದ್ಘಾಟನೆಗೊಂಡು ಹಲವು ವರ್ಷಗಳಾಗರೂ ಅಪೂರ್ಣವಾಗಿ ದುಸ್ಥಿತಿಯಲ್ಲಿ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅದನ್ನು ಪೂರ್ಣಗೊಳಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ. ಕೆ. ಎಂ. ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು) :

ಅ) ಬಂದಿದೆ.

ಆ) ಲೋಕೋಪಯೋಗಿ ಇಲಾಖೆಯು 1981ನೇ ಸಾಲಿನಲ್ಲಿ ಮಂಗಳೂರು ಮಹಾನಗರಪಾಲಿಕೆಯ ಪರಿಶಿಷ್ಟಜಾತಿ : ವರ್ಗದವರಿಗಾಗಿ ಮೀಸಲಿಟ್ಟಿರುವ ಶೇ.18ರ ಹಣದಲ್ಲಿ ವಿದ್ಯಾರ್ಥಿನಿಲಯ ಕಟ್ಟಡದ ನಿರ್ಮಾಣವನ್ನು ತೆಗೆದುಕೊಂಡಿರುತ್ತದೆ ಹಾಗೂ ಹಣವನ್ನು ಲೋಕೋಪಯೋಗಿ ಇಲಾಖೆಯಲ್ಲಿ ಠೇವಣಿ ಇಟ್ಟಿದ್ದ ಕಾರಣ ಕಾಮಗಾರಿಯು ಅಪೂರ್ಣವಾಗಿರುತ್ತದೆ.

ಜಿಲ್ಲಾಪಂಚಾಯತಿಯು ಇತ್ತೀಚೆಗೆ ಸದರಿ ಕಟ್ಟಡವನ್ನು ಪೂರ್ಣಗೊಳಿಸಲು ರೂ.14.00 ಲಕ್ಷಗಳ ಅಂದಾಜನ್ನು ತಯಾರಿಸಿರುತ್ತೆ. ಲೋಕೋಪಯೋಗಿ ಇಲಾಖೆಯಲ್ಲಿ ಖರ್ಚಾಗದೇ ಉಳಿದಿರುವ ರೂ.10.68ಲಕ್ಷಗಳ ಜೊತೆಗೆ ಸರ್ಕಾರದಿಂದಲೂ ಹಣ ಒದಗಿಸಿ ಕಾಮಗಾರಿಯನ್ನು ಪೂರ್ಣಗೊಳಿಸಿ ಕಟ್ಟಡವನ್ನು ಪರಿಶಿಷ್ಟ ಜಾತಿ : ವರ್ಗಗಳ ವಿದ್ಯಾರ್ಥಿಗಳ ಸೌಲಭ್ಯಕ್ಕಾಗಿ ಉಪಯೋಗಿಸಿಕೊಳ್ಳಲಾಗುವುದು.

ಮಂಗಳೂರು ಮಹಾನಗರ ಪಾಲಿಕೆಯ ಕಟ್ಟಡದ ದುರಸ್ತಿ

1590 - ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಮಹಾನಗರ ಪಾಲಿಕೆಯ 3 ಅಂತಸ್ತಿನ ಕಟ್ಟಡವನ್ನು ಕಟ್ಟಿದ ಕಟ್ಟಡದ ಒಟ್ಟು ವೆಚ್ಚವೆಷ್ಟು? ಕಟ್ಟಿಸಲು ಗುತ್ತಿಗೆ ಪಡೆದ ಸಂಸ್ಥೆ ಯಾವುದು? ಹಾಗೂ ಕಾಮಗಾರಿಯ ಮೇಲ್ವಿಚಾರಣಾ ಶುಲ್ಕ ಶೇಕಡಾವಾರು ಎಷ್ಟು?

ಆ) ಮಳೆಗಾಲದಲ್ಲಿ ಕಟ್ಟಡ ಪೂರ್ತಿ ಸೋರುವುದು ಸರ್ಕಾರದವರರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರದವರು ತೆಗೆದುಕೊಳ್ಳುವ ಕ್ರಮಗಳೇನು?

ಶ್ರೀ ಮೀರಾಜುದ್ದೀನ್ ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :

ಅ) ರೂ. 75 ಲಕ್ಷ ವೆಚ್ಚ ಮಾಡಲಾಗಿದೆ. ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ಇವರಿಗೆ ಗುತ್ತಿಗೆ ನೀಡಲಾಗಿತ್ತು ಕಾಮಗಾರಿ ಮೇಲ್ವಿಚಾರಣೆ ದರ ಶೇಕಡ 4 ಆಗಿರುತ್ತದೆ.

ಆ) ಬಂದಿದೆ.

ಇ) ಅಂತಿಮ ಪಾವತಿಯ ಹಣವನ್ನು ತಡೆಹಿಡಿಯಲಾಗಿದೆ. ಕಟ್ಟಡದ ಸೋರುವ ಬಗ್ಗೆ ಗುತ್ತಿಗೆದಾರರಿಗೆ ತಿಳಿಸಲಾಗಿದ್ದು, ಕಟ್ಟಡದ ಸೋರುವಿಕೆಯನ್ನು ತನಿಖೆಮಾಡಿ ವರದಿ ಸಲ್ಲಿಸಲು ಕೆಎಸ್‌ಸಿಸಿಗೆ ಕೋರಲಾಗಿದೆ. ಈ ಬಗ್ಗೆ ತನಿಖಾ ಬಂದ ಮೇಲೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಹೊಸ ಮಾರ್ಕೆಟಿಂಗ್ ಹಾಗೂ ವಾಣಿಜ್ಯ ಸಮುಚ್ಚಯಗಳನ್ನು ಪ್ರಾರಂಭಿಸುವುದು.

1591 - ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಪೌರಾಡಳಿತ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಯಾವ ಹೊಸ ಮಾರ್ಕೆಟಿಂಗ್ ಹಾಗೂ ವಾಣಿಜ್ಯ ಸಮುಚ್ಚಯಗಳನ್ನು ಆರಂಭ ಮಾಡಲಾಗಿದೆ?